'ಅವ್ರು ಮಾಡಾದ ನಾನು ಬೋಸತಿ ನೋಡೀವ್ನಿ. ಅವ್ರು ಬ್ರಾಂಬ್ರು ಮಾಡ್ತಾರೆ. ಅದ ಕಟ್ಕಂಡು ನಿನಗೇನ್ಲ? ಬಾ ಕೇರಿಗೋಗಾನಾ' ಎಂದು ಗೊದ್ಲೆಯ ರಟ್ಟೆ ಹಿಡಿದು ಬಲವಂತದಿಂದ ಮೇಲಕ್ಕೆಬ್ಬಿಸಿದ. ನೀರಿನಿಂದ ಹೊರ ಬಂದ ಬ್ರಾಹ್ಮಣರು ತಮ್ಮ ಹೆಗಲ ಮೇಲಿಂದ ಇಳೆ ಬಿಟ್ಟುಕೊಂಡಿದ್ದ ಜನಿವಾರವನ್ನು ಬಲಗೈ ಬೆರಳುಗಳ ಮಧ್ಯೆ ಹಿಡಿದು ಎಡಗೈಯಿಂದ ಮೇಲ್ಮುಖವಾಗಿ ಎಳೆಯುತ್ತ ನೀರನ್ನು ಹಿಂಡಿ, ಒದ್ದೆ ಪಂಚೆಯನ್ನು ಬಿಚ್ಚಿ ಮಡಿ ಪಂಚೆಯನ್ನುಟ್ಟು ಕಲ್ಲು ಮಂಟಪದ ಮೇಲೆ ಹರವಿ, ತಲೆ ಹಿಂಬದಿಯ ಜುಟ್ಟಿನ ಕೂದಲನ್ನು ಅಗಲವಾಗಿ ಬಿಡಿಸಿ ಸೂರ್ಯಾಭಿಮುಖವಾಗಿ ಕುಳಿತು ಕಣ್ಮುಚ್ಚಿ ಧ್ಯಾನ ಮಾಡತೊಡಗಿದರು.

ಸ್ವಲ್ಪ ಸಮಯಕ್ಕೆ ಅಲ್ಲಿಗೆ ಬಂದ ಬ್ರಾಹ್ಮಣ ಹುಡುಗರು ನೀರಿಗಿಳಿದು ಮುಳುಗೇಳತೊಡಗಿದರು. ಅವರೆಲ್ಲಾ ಗೊದ್ಲೆಯ ಶಾಲಾ ಸಹಪಾಠಿಗಳಾಗಿದ್ದರು.

ಮುಳ್ಕಟ್ಟನಿಗೆ ತಾನೇ ನೀರಿನಲ್ಲಿ ಮುಳುಗೇಳುತ್ತ ಉಸಿರು ಕಟ್ಟಿದಂತಾಗಿ ಅಸಹನೆಯಿಂದ ಮಗನ ಕೈ ಹಿಡಿದು ಎಳೆದುಕೊಂಡು ಹೊರಟನು. ದಾರಿಯಲ್ಲಿ ಎದುರಾದ ಬ್ರಾಹ್ಮಣರ ಕಂಡು ಮುಳ್ಕಟ್ಟ ಗೊದ್ಲೆಯೊಂದಿಗೆ ರಸ್ತೆಯಿಂದ ತಟಕ್ಕನೆ ಬೇಲಿ ಪಕ್ಕಕ್ಕಿಳಿದು ನಿಂತ. ತನ್ನಪ್ಪನ ನಡೆಯಲ್ಲಿ ಬ್ರಾಹ್ಮಣರ ಬಗ್ಗೆ ಗೌರವ, ಭಯ, ಭಕ್ತಿ ಇರುವುದನ್ನು ಗೊದ್ಲೆ ಗಮನಿಸಿದ.

ಗುಡಿಸಲಿಗೆ ಬರುವವರೆಗೂ ಸುಮ್ಮನಿದ್ದ ಮುಳ್ಕಟ್ಟ, ಆಗ ತಾನೆ ನಿದ್ರೆಯಿಂದೆದ್ದು, ಅಲ್ಲಲ್ಲಿ ಹರಿದಿದ್ದ ಕೌದಿಗಳನ್ನು ಮಡಿಸುತ್ತಿದ್ದ ಕರ್ಕಿಲಿಗೆ ಸಿಟ್ಟಿನಿಂದ ಹೇಳಿದ.

'ನೀನು ವೈನಾಗಿ ಗರ್ಕೆ ಹೊಡೀತಾ ಮಲಗಿರ್ತೀಯ. ನೋಡು ನಿನ್ಮಗ ಇವೊತ್ತೂ ಕೆರೆತಾಕೆ ಹ್ವಾಗಿ ಬ್ರಾಂಬ್ರು ಬೊಗ್ಸೆಲಿ ನೀರು ತುಂಬ್ಕಂಡು ಸ್ವಾಮಿಗೆ ಬುಡಾದ ನೋಡ್ತಾ ಕುಂತಿದ್ದ. ಅದ್ರಲ್ಲೇನು ಇಸೇಸಾ ಐತೊ ನಾಕಾಣೆ. ಹೊತ್ತೇ ಮೂಡಿರಕ್ಕಿಲ್ಲ. ಇವ್ನು ಕತ್ಲೇಲಿ ಒಬ್ನೇ ಹೋಯ್ತಾನಲ್ಲ, ಹಾವು ಪಾವು ತುಳುದ್ರೆ ಯೋನ್ ಗತಿ? ಒಂದ್ವಾರದಿಂದ ಇದೇ ಆತು. ನಂಗೆ ಯೋಳೀ ಯೋಳೀ ಸಾಕಾಗೈತೆ, ನೀನೂ ಯೋಳು, ನಿನ್ಮಾತಾದ್ರೂ ಅವ್ನ ಕಿವಿಗೋಯ್ತಾವ ನೋಡಾನಾ. ಗೌಡ್ರು ಮನೆ ಹಸ ಸತ್ತೋಗೈತೆ. ನಿನ್ನೆ ಸಂಜೀಗೆ ಯೋಳಿದ್ರು. ಬಾರೆಗೆ ಹೊತ್ತಾಕಿ ಬಾಡು ತಗಂಬತ್ತೀನಿ" ಎಂದವನು ಸೂರಿಗೆ ಸಿಗಿಸಿದ್ದ ಚೂರಿ ತೆಗೆದುಕೊಂಡು ಗುಡಿಸಿಲಿನಿಂದ ಹೊರ ಬಂದು ಅಕ್ಕ ಪಕ್ಕದ ಗುಡಿಸಲುಗಳತ್ತ ಮುಖ ಮಾಡಿ ಕೂಗಿ ಹೇಳಿದ.

'ಎಲ್ರಿಲಾ, ಗ್ವಾಟಾ, ಮಂಕ್ರ, ಗೊಳ್ಳ, ನರಾಸಿ, ಮಚ್ಚು, ಹಗ್ಗ, ದೊಡ್ಡಡಿ ತಗಂಡು ಬನ್ರಿಲಾ. ಗೌಡ್ರ ಮನೆ ಹಸ ಸತ್ತೋಗೈತೆ'.

ಮಗನ ಪಕ್ಕ ಕೂತ ಕರ್ಕಿಲಿ, 'ದಿನಾ ಆಟೊತ್ಗೆ ಎದ್ದು ಕೆರೆತಾಕೆ ಹ್ವಾಗಿ ಬ್ರಾಂಬ್ರು ಮಾಡಾದ ನೋಡಾಕೆ ಯಾಕೋಗ್ಬೇಕು? ಒಂದಪ ನೋಡಿದ್ರೆ ಸಾಕಲ್ವ? ಬ್ಯಾಡ ಎರ್ಡ್‌ದಪ ಅವ್ರ ಮಕ್ಳು ಮೊದ್ಲ ಕೋಳಿ ಕೂಗೋ ಮುಂಚೇನೆ ಎದ್ದು ಪಾಠ ಓದ್ಕಂಡಂಗೆ ನೀನೂ ಎದ್ದು ಓದ್ಕ. ಬುದ್ವಂತ ಆಗು. ಅದ್ಬುಟ್ಟು ಕೆರೆತಾಕೆ ಹ್ವಾಗಿ ಅವ್ರುನ್ನೇ ನೋಡ್ತಾ ಕುಂತ್ರೆ ನೋಡಿದ್ ಜನ ಆಕ್ಸಾಲ ಮಾಡ್ತಾರೆ ಮಗ' ಎಂದು ಅವನ ತಲೆ ನೇವರಿಸುತ್ತ ಹೇಳಿದಳು.

ನೆತ್ತಿಗೆ ಬಂದಿದ್ದ ಸೂರ್ಯ ತನಗೆ ಯಾರ ಮೇಲೋ ಭಯಂಕರ ಸಿಟ್ಟಿದೆ ಎಂಬಂತೆ ರವ ರವ ಎನ್ನುತ್ತಿದ್ದ. ಗುಡಿಸಲಿಗೆ ಬಂದ ಮುಳ್ಕಟ್ಟ ತನ್ನ ಬೆನ್ನಿನ ಮೇಲಿಂದ ಇಳೆ ಬಿಟ್ಟುಕೊಂಡಿದ್ದ ಬಾಡಿನ ಗಂಟನ್ನು ಕೆಳಗಿರಿಸಿ 'ಉಸ್ಸಪ್ಪ' ಎಂದು ಕುಳಿತು, ತಲೆಗೆ ಸುತ್ತಿಕೊಂಡಿದ್ದ ವಲ್ಲಿ ತೆಗೆದು ಹಣೆಯ ಮೇಲೆ ಒಸರುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತ, 'ಮಗ ಇಸ್ಕೂಲಿಗೆ ಹೋದ್ನ?' ಎಂದು ಕೇಳಿದ.

ಮುದ್ದೆ ಮಾಡಲು ಒಲೆಯ ಮೇಲೆ ಮಡಕೆಯಲ್ಲಿ ನೀರಿಟ್ಟು ಬೆಂಕಿಗೆ ಪುಳ್ಳೆ ಹಾಕುತ್ತ ಕರ್ಕಿಲಿ 'ಹ್ಞೂಂ ಹ್ವಾದ' ಎಂದಳು.

'ಇನ್ನೊಂದಪ ಆಟೊತ್ಗೆ ಕೆರೆತಾಕೆ ಹೋಗ್ಬೇಡ ಅಂತ ಬುದ್ವಾದ ಯೋಳ್ದ?'

'ಯೋಳ್ದೆ' ಎನ್ನುತ್ತ ಡಬ್ಬದಲ್ಲಿದ್ದ ಅಸಿಟನ್ನು ತೆಂಗಿನ ಚಿಪ್ಪಿನಲ್ಲಿ ತುಂಬಿಕೊಂಡು ಮಡಕೆಯೊಳಕ್ಕೆ ಸುರುವಿದಳು.

'ನಾನು ಇಲ್ಲೇ ಹೋಗ್ಬತ್ತೀನಿ'.

'ಹೆಂಡ ಕುಡಿಯಾಕೆ ಹೊಂಟೆ ಅನ್ನು. ಅದಿಲ್ದಿದ್ರೆ ಬಾಡು ಹೊಟ್ಟೆಗಿಳಿಯಾಕ್ಕಿಲ್ವೇನೊ' ಎಂದ ಕರ್ಕಿಲಿ ಮಾತು ತನಗೆ ಕೇಳಿಸಲೇ ಇಲ್ಲ ಎಂಬಂತೆ ಗುಡಿಸಲಿನಿಂದ ಹೊರ ಬಂದ. ಮಂಕ್ರ, ಗ್ವಾಟ, ಗೊಳ್ಳ, ನರಾಸಿ ಇವನಿಗೇ ಕಾಯುತ್ತಾ ನಿಂತಿದ್ದರು.